## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 167/2021 |

| | | |
|---|---|---|
| ಸಾಕ್ಷಿದಾರರ ಹೆಸರು | ಶಿವಕುಮಾರ್ | |
| ತಂದೆಯ ಹೆಸರು | ಪುಟ್ಟ ಸ್ವಾಮಿ | ಸಾಕ್ಷಿಗೆ ದಿಃ 20.01.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 34 ವರ್ಷ | |
| ಉದ್ಯೋಗ | ವ್ಯವಸಾಯ | ಪಿ.ಡಬ್ಲ್ಯೂ-02 |
| ವಾಸ ಸ್ಥಳ | ನುಗ್ಗಹಳ್ಳಿ ಕೊಪ್ಪಲು ಗ್ರಾಮ, ಬನ್ನೂರು ಹೋಬಳಿ, ತಿ.ನರಸೀಪುರ ತಾಲ್ಲೂಕು | ಸಿ.ಡಬ್ಲ್ಯೂ-01 |

## ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ.4 ಪುಟ್ಟಸ್ವಾಮಿ ನನಗೆ ತಂದೆಯಾಗಬೇಕು. ಚಾಸಾ.5 ಸಿದ್ದಪ್ಪಾಜಿ ಪರಿಚಯವಿರುತ್ತದೆ. ಆರೋಪಿಯ ಪರಿಚಯವಿರುತ್ತದೆ. ಮೃತ ಮಹದೇವಮ್ಮ ನನಗೆ ತಾಯಿಯಾಗಬೇಕು. ನಾವು ನಮ್ಮ ಮನೆಯಲ್ಲಿ ನಮ್ಮ ತಾಯಿ, ತಂದೆ, ನಾನು ಮತ್ತು ನನ್ನ ತಮ್ಮ ಮಂಜುನಾಥ್ ವಾಸವಾಗಿದ್ದೇವು. ನಮ್ಮ ಮನೆಯಲ್ಲಿ 3 ಎಮ್ಮೆಗಳು ಇದ್ದವು. ನಮ್ಮ ತಾಯಿ ಪ್ರತಿದಿನ ಎಮ್ಮೆಗಳನ್ನು ಕರಿಕಲ್ಲು ಬೋರೆ ಗೋಮಾಳದಲ್ಲಿ ಎಮ್ಮೆಗಳನ್ನು ಮೇಯಿಸಲು ಮದ್ಯಾಹ್ನ 1 ಗಂಟೆಗೆ ಹೋಗಿ ಸಂಜೆ 5 ಗಂಟೆಗೆ ಮನೆಗೆ ಬರುತ್ತಿದ್ದರು. ದಿಃ 18.08.2020 ರಂದು ನಮ್ಮ ತಾಯಿ 1 ಗಂಟೆಗೆ ಎಮ್ಮೆಗಳನ್ನು ಮೇಯಿಸಲು ಕರಿಕಲ್ಲು ಬೋರೆ ಗೋಮಾಳಕ್ಕೆ ಹೋಗಿದ್ದರು ಚಾಸಾ.5 ಸಿದ್ದಪ್ಪಾಜಿ ಇವರು ಮದ್ಯಾಹ್ನ 3 ಗಂಟೆಗೆ ನಮ್ಮ ಮನೆಯ ಹತ್ತಿರ ಬಂದು ನಮ್ಮ ತಂದೆಯನ್ನು ಎಮ್ಮೆಗಳು ಎಲ್ಲಿ ಎಂದು ಕೇಳಿದರು ಆಗ ನಮ್ಮ ತಂದೆ ಎಮ್ಮೆಗಳನ್ನು ನಮ್ಮ ತಾಯಿ ಮೇಯಿಸಿಕೊಂಡು ಬರಲು ಹೋಗಿದ್ದಾರೆ

ಎಂದು ಹೇಳಿದರು. ಆಗ ಅವರು ನಿಮ್ಮ ಎಮ್ಮೆಗಳು ನಮ್ಮ ಮನೆಯ ಹತ್ತಿರ ಬಂದಿವೆ ಅವುಗಳನ್ನು ಹಿಡಿದು ಕಟ್ಟಿ ಹಾಕಿದ್ದೇವೆ ನೀವು ಬನ್ನಿ ಎಂದು ಅವರ ಮನೆಯ ಹತ್ತಿರ ಕರೆದುಕೊಂಡು ಹೋದರು. ಊರಲ್ಲಿ ಜನರು ಸಂಜೆ 3 ಗಂಟೆಗೆ ನಮ್ಮ ತಾಯಿ ಕೊಲೆ ಆಗಿದ್ದಾಳೆ ಎಂದು ಮಾತಾನಾಡುತ್ತಾ ಜನ ಹೋಗುತ್ತಿದ್ದರು ನಾನು ಕೂಡ ಕರಿಕಲ್ಲು ಬೋರೆ ಗೋಮಾಳದ ಹತ್ತಿರ ಹೋದೆನು. ಅಲ್ಲಿ ಹೋಗಿ ನೋಡಿದಾಗ ನಮ್ಮ ತಾಯಿ ಮೃತ ಪಟ್ಟಿದ್ದು ಅವರಿಗೆ ತಲೆಯ ಹಿಂದಿನ ಭಾಗ, ತಲೆಯ ಮೇಲೆ ಮಧ್ಯದ ಭಾಗದಲ್ಲಿ , ಹಾಗೂ ಕತ್ತಿಗೆ ಬಿಗಿದ ಹಾಗೆ ಗುರುತು ಇತ್ತು. ನಮ್ಮ ತಾಯಿಯ ಧರಿಸುತ್ತಿದ್ದ ಚಿನ್ನದ ಗುಂಡುಗಳು ಇರುವ ಕರಿಮಣಿ ಸರ, ಒಂದು ಜೊತೆ ಕಿವಿಯ ಓಲೆಗಳು ಇರಲಿಲ್ಲ. ಯಾರು ಬಂಗಾರದ ಒಡವೆಗಳಿಗಾಗಿ ನಮ್ಮ ತಾಯಿಯನ್ನು ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು. ನಂತರ ನಾನು ಪೊಲೀಸ್ ಠಾಣೆಗೆ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ. ಫಿರ್ಯಾದಿಯನ್ನು ನಿಪಿ.3 ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಫಿರ್ಯಾದಿಯನ್ನು ನಾನೇ ಬರೆದಿರುತ್ತೇನೆ. ಪೊಲೀಸರು ನಂತರ ಸ್ಥಳಕ್ಕೆ ಬಂದಾಗ ನಾನೇ ಸ್ಥಳವನ್ನು ತೋರಿಸಿರುತ್ತೇನೆ. ಸ್ಥಳದಲ್ಲಿ ಪೊಲೀಸರು ಸ್ಥಳದ ಪಂಚನಾಮೆ ಮಾಡಿ, ಸ್ಥಳದಲ್ಲಿ ಇದ್ದ ಶವವನ್ನು ನೋಡಿದ್ದರು, ಶವದ ಪಕ್ಕದ್ದಲ್ಲಿ ಇದ್ದ ರಕ್ತ ಮಿಶ್ರಿತ ಮಣ್ಣು ಮತ್ತು ಹಸಿ ಹುಲ್ಲು ಹಾಗೂ ಸ್ಥಳದಲ್ಲಿ ಇದ್ದ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ರಹಿತ ಮಣ್ಣನ್ನು ಹಾಗೂ ನನ್ನ ತಾಯಿಗೆ ಸಂಬಂಧಪಟ್ಟ ಬಳೆ ಚೂರುಗಳು ಹಾಗೂ ರಕ್ತದ ಕಲೆಯಾದ ಟವಲ್ ಅನ್ನು ಅಮಾನತು ಪಡಿಸಿಕೊಂಡು, ಸಂಜೆ 6 ಗಂಟೆಯಿಂದು ರಾತ್ರಿ 8.30 ಗಂಟೆಯವರೆಗೆ ಸ್ಥಳದ ಮಹಜರು ಮಾಡಿರುತ್ತಾರೆ. ಸ್ಥಳದ ಮಹಜರ್ ಗೆ ನಾನು ಕೂಡ ಸಹಿ ಮಾಡಿರುತ್ತೇನೆ. ಸ್ಥಳದ ಮಹಜರ್ ಅನ್ನು ನಿಪಿ.4 ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಮಹಜರ್ ಗೆ ಸಾಕ್ಷಿದಾರರು ಕೂಡ ಸಹಿ ಮಾಡಿರುತ್ತಾರೆ. ನಂತರ ಪೊಲೀಸರು ಶವವನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸಾಕ್ಷಿಯು ಸ್ಥಳದಲ್ಲಿ ತೆಗೆದ 4 ಪೋಟೋಗಳನ್ನು ಗುರುತಿಸಿದ್ದು ಸದರಿ ಪೋಟೋಗಳನ್ನು ನಿಪಿ.5 ರಿಂದ ನಿಪಿ.8 ಎಂದು ಗುರುತಿಸಲಾಯಿತು. ನಂತರ ಆರೋಪಿತರು ಕೊಲೆ ಮಾಡಿದರು ಎಂದು ಗೊತ್ತಾಗಿರುತ್ತದೆ. ನಂತರ ನಾನು ನನ್ನ ತಾಯಿ ಒಡವೆಗಳನ್ನು ಧರಿಸಿರುವ ಪೋಟೋಗಳನ್ನು ಪೊಲೀಸರ ಮುಂದೆ

ಹಾಜರುಪಡಿಸಿರುತ್ತೇನೆ ಸದರಿ ಫೋಟೋಗಳನ್ನು ಸೀಲ್ ಆದ ಚೀಲದಿಂದ ತೆಗೆದು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಸದರಿ ಫೋಟೋಗಳನ್ನು ಗುರುತಿಸಿರುತ್ತಾರೆ. ಪೊಲೀಸರು ಫೋಟೋಗಳನ್ನು ಮಹಜರ್ ಮೂಲಕ ವಶಪಡಿಸಿಕೊಂಡಿರುತ್ತಾರೆ. ಸದರಿ ಫೋಟೋಗಳ ಅಮಾನತು ಪಂಚನಾಮೆಯ ಅನ್ನು ನಿಪಿ.9 ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಅಭಿಯೋಜಕರು ಸಮಯ ಕೇಳಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಓ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು